**ಪಾಲಕರ ಅಪೇಕ್ಷೆಯಂತೆ ನಿಮ್ಮ ಮಗಳು ಪಂಕಜಾ ಹಾಗೂ ನಿರ್ದೇಶಕರಾದ ಕಲಾವಿದ ಜೀವನ್ ಮುಂತಾದವರು ಈಗಲೂ ಅದನ್ನು ಮುಂದುವರೆಸಿದ್ದಾರೆ. ಅಲ್ಲಿ ಇಂಗ್ಲಿಷ್ ಮಾಧ್ಯಮ ಹಾಗೂ ಕನ್ನಡ ಶಾಲೆಯ ಮಕ್ಕಳಿಗೆ ನಾಟಕ ಕಲಿಸಿಕೊಡುತ್ತಿದ್ದಾರೆ. ಇದರ ಬಗ್ಗೆ ನಿಮ್ಮ ಮಾತು...**

ನಾನು, ಮಗಳು ಪಂಕಜಾಳ ಮನೆಗೆ ಬೆಂಗಳೂರಿಗೆ ಬಂದಾಗ ಬಡಾವಣೆಯ ಜನರು, ನಾನು ರಂಗ ಕಲಾವಿದೆ ಎಂದು ಗುರ್ತಿಸಿ, ಗೌರವಿಸಿದರು. ಅದರಂತೆ ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಅಭಿನಯ, ರಂಗಗೀತೆ, ಕ್ರಾಫ್ಟ್, ಕಥೆ, ಕವಿತೆ, ಹಾಡು ಮುಂತಾದ ಸಾಂಸ್ಕೃತಿಕ ಕಲೆಗಳನ್ನು ಕಲಿಸಲು ನನ್ನ ಮಗಳೂ ಮುಂದಾದಳು. ಜಿ. ಚನ್ನಕೇಶವ ಅವರ 'ಲೋಕ ಚರಿತ'ದಲ್ಲಿ ಮಗಳು ಪಂಕಜಾ ರಂಗ ಗೀತೆಗಳನ್ನು ಕಲಿತ ಗಾಯಕಿ. ಹೀಗಾಗಿ ಒಂದು ಪುಟ್ಟ ನಾಟಕ ಮಾಡಿಸಿದೆ. ಅದನ್ನೇ ಈಗ ಮುಂದುವರೆಸಿದ್ದಾರೆ. ಪ್ರತಿ ವರ್ಷ ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ತರಬೇತಿ ಮಾಡುತ್ತಿದ್ದಾರೆ. ಮೈಸೂರ ರಂಗಾಯಣದಲ್ಲಿ ಥೇಟರ್ ಡಿಪ್ಲೋಮಾ ಮಾಡಿದ ಜೀವನ್ ಮಕ್ಕಳ ನಾಟಕಕ್ಕೆ ನಿರ್ದೇಶನ ಮಾಡುತ್ತಿದ್ದಾರೆ. ಮಕ್ಕಳಿಗೂ ಇದರಿಂದ ಮಾತನಾಡುವ, ಅಭಿವ್ಯಕ್ತಿಸುವ, ಬೇರೆಯವರೊಂದಿಗೆ ವ್ಯವಹರಿಸುವ, ಆತ್ಮವಿಶ್ವಾಸ ಹೆಚ್ಚಿಸುವ, ನಿರೂಪಣೆ ಮಾಡುವ, ತಮ್ಮ ತಮ್ಮಲ್ಲಿಯೇ ಸಂಕೋಚ ಬಿಟ್ಟು ಮುಕ್ತವಾಗುವ ಗುಣಗಳು ಬೆಳೆಯುತ್ತವೆ. ಈಗ 5ನೇ ಪ್ರಯೋಗವನ್ನು ಮಕ್ಕಳು ಮಾಡುತ್ತಿದ್ದಾರೆ. ನಾಲ್ಕು ವರ್ಷದಿಂದ ಹದಿನಾಲ್ಕು ವರ್ಷದ ಮಕ್ಕಳೂ ಭಾಗವಹಿಸಿದ್ದಾರೆ. ಮಕ್ಕಳ ಪಾಲಕರು ಇದರಲ್ಲಿ ಭಾಗಿಯಾಗುತ್ತಾರೆ, ಹೆಚ್ಚಿನ ಸಂಭಾವನೆ ಕೊಟ್ಟು ದೂರ ದೂರ ಮಕ್ಕಳನ್ನು ಕಳಿಸಲು ಹಿಂದೇಟು ಹಾಕುವ ಪಾಲಕರಿಗೆ ಹಾಗೂ ಭಾಗವಹಿಸುವ ಮಕ್ಕಳಿಗೆ ಇದು ಉಪಯುಕ್ತವಾಗಿದೆ. ಉತ್ತಮ ನಿರ್ದೇಶಕರಾಗಿರುವ ಜೀವನ್ ಮಕ್ಕಳಿಗೆ ಮಾರ್ಗದರ್ಶನ ಮಾಡುತ್ತಾರೆ. ಮಗಳು ರಂಗಗೀತೆ, ಹಾಡು ನೃತ್ಯ ಕಲಿಸುತ್ತಾಳೆ. ಇದೊಂದು ಸದವಕಾಶ ಅಲ್ಲವೇ?

**◆ ಮಹಿಳೆಗೆ ಶಿಕ್ಷಣ ಬಹಳ ಮುಖ್ಯ. ಆದರೆ ಬಹಳಷ್ಟು ಕಲಾವಿದೆಯರು ಹೆಚ್ಚಿನ ಶಿಕ್ಷಣವನ್ನು ಪಡೆಯಲು ಸಾಧ್ಯವಾಗಿಲ್ಲ. ಒಮ್ಮೆ ಅಭಿನಯಕ್ಕೆ ಕಾಲಿಟ್ಟ ಮೇಲೆ ಸಂಪೂರ್ಣ ಅದರಲ್ಲಿಯೇ ತೊಡಗಿಸಿಕೊಂಡ ನಿಮ್ಮ ಅಭಿಪ್ರಾಯವೇನು?**

ವೃತ್ತಿ ಕಲಾವಿದೆಯರಾಗಿ ನಾಟಕ ಕಂಪನಿಯಲ್ಲಿ ಸರ್ವೀಸ್ ಮಾಡಲಿ ಅಥವಾ ಹಳ್ಳಿಗಾಡಿನ ನಾಟಕಗಳಲ್ಲಿ ಸರ್ವೀಸ್ ಮಾಡಲಿ ಅವರು ನಾಟಕ ನಡೆಯುವ ಕಡೆ ಸಂಚರಿಸುತ್ತಿರುತ್ತಾರೆ. ಒಂದೂರಿನಲ್ಲಿ ನೆಲೆ ನಿಲ್ಲುವುದಿಲ್ಲ. ಇನ್ನು ಕೆಲವರು ನಮ್ಮಂತಹ ಸಾಧಾರಣ ರೈತರ ಅಥವಾ ಕೃಷಿ ಕೂಲಿಕಾರರ ಮಕ್ಕಳು. ನಮ್ಮಂತಹವರಿಗೂ ಓದುವ ಅವಕಾಶ ಸಾಮಾನ್ಯವಾಗಿ ಇರುವುದಿಲ್ಲ. ನನ್ನ ತಂದೆ ನನಗೆ ಎಸ್‌ಎಸ್‌ಎಲ್‌ಸಿವರೆಗೆ ಓದಿಸಿದ್ದಕ್ಕೆ ನಾನು ಅವರಿಗೆ ಆಜನ್ಮ ಋಣಿಯಾಗಿದ್ದೇನೆ. ಈಗ ಹಾಸ್ಟೆಲ್‌ಗಳು, ಸರ್ಕಾರಿ ವಸತಿ ಶಾಲೆಗಳು ಇವೆ. ಅನುಕೂಲಗಳೂ ಹೆಚ್ಚಿವೆ. ಕಲಾವಿದೆಯರು ಮಕ್ಕಳನ್ನು ಚೆನ್ನಾಗಿಯೇ ಓದಿಸುತ್ತಾರೆ. ಕಲಾವಿದರ ಮಕ್ಕಳು ಓದಿ ಉನ್ನತ ಹುದ್ದೆಯಲ್ಲಿಯೂ ಇದ್ದಾರೆ. ತಮ್ಮ ತಾಯಿ ಕಲಾವಿದೆ. ಎಂದು ಹೆಮ್ಮೆಯಿಂದ ಹೇಳುವ ಮಕ್ಕಳನ್ನು ಕಂಡಾಗ ಅಭಿಮಾನ ಎನಿಸುತ್ತದೆ.

**◆ ಗೃಹಿಣಿಯಾಗುವುದಕ್ಕೂ, ವೃತ್ತಿ ರಂಗ ಕಲಾವಿದೆಯಾಗುವುದಕ್ಕೂ ಏನು ಅಂತರ ಕಂಡುಕೊಂಡಿರುವಿರಿ? ಗೃಹಿಣಿಯ ಕೆಲಸ ನಿರ್ವಹಿಸುವುದು ಸಹಜವಾದರೂ ಸುಲಭವಲ್ಲ. ನೀವು ಎರಡನ್ನೂ ನಿಭಾಯಿಸಿದವರು...**

ಗೃಹಿಣಿಯಾದರೆ ಗಂಡ, ಮಕ್ಕಳು, ಅತ್ತೆ-ಮಾವ, ಸಂಸಾರ ಎಂದು ಸರಿದೂಗಿಸಿಕೊಂಡು ಹೋಗಬೇಕು. ಎರಡನ್ನೂ ನಿಭಾಯಿಸುವಲ್ಲಿ ಕಷ್ಟವಿದೆ. ಒಬ್ಬ ವೃತ್ತಿ ರಂಗ ಕಲಾವಿದೆಯಾಗಿ ಎಷ್ಟೋ ದಿನ ಹಗಲನ್ನೇ ಕಾಣಲಿಲ್ಲ, ಸೂರ್ಯನನ್ನು ನೋಡಲಿಲ್ಲ. ನಾಟಕ ಕಂಪನಿಯಲ್ಲಿ, ಹಳ್ಳಿಗಳಲ್ಲಿ ರಾತ್ರಿಯಿಡೀ ನಾಟಕವಾಡಿ ದುಡಿದಿದ್ದೇನೆ. ಹಾಗೆ ದುಡಿದ ಹಣದಲ್ಲಿ ನಾಲ್ವರು ತಂಗಿಯರ ಮದುವೆ ಮಾಡಿದ್ದೇನೆ. ತಮ್ಮನಿಗೆ ತನ್ನ ಹೊಲದ ದುಡಿಮೆ ಜತೆಗೆ ನನ್ನ ದುಡಿಮೆಯೂ ಸೇರಿ ಅವರ ಸಂಸಾರ ಸುಖವಾಗಿದೆ. ಮಗಳು ಪಂಕಜಾ ಡಿಪ್ಲೊಮಾ ಓದಿದ್ದಾಳೆ. ಅವಳು ಸಂಗೀತ ಕಲಿತಿದ್ದಾಳೆ. ಅಳಿಯ ಮುಂಬೈನಲ್ಲಿ ಬಹುರಾಷ್ಟ್ರೀಯ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದಾನೆ. ಮಗ